# Sri Varadendra Thirthara Aradhana


*ವಾದೇ ವಿಜಯಶೀಲಾಯ ವರದಾಯ ವರಾರ್ಥಿನಾಂ।*

*ವದಾನ್ಯಜನಸಿಂಹಾಯ ವರದೇಂದ್ರಾಯ ತೇ ನಮಃ।*

*वादे विजयशीलाय वरदाय वरार्थिनां।*

*वदान्यजनसिंहाय वरदेंद्राय ते नमः।*

## ಆರಾಧನ – ಆಷಾಢ ಶುದ್ದ ಷಷ್ಟಿ





ಸನ್ಯಾಸಾಶ್ರಮ ಕಾಲ **1761-1785**

ಪೂರ್ವಾಶ್ರಮ ನಾಮ - ಬಲರಾಮಾಚಾರ್ಯರು

ಆಶ್ರಮ ಸ್ವೀಕಾರ – ಆಶ್ವೀಜ ಬಹುಳ ಸಪ್ತಮಿ ವೃಷ ಸಂವತ್ಸರ

ಆಶ್ರಮ ಗುರುಗಳು – ಶ್ರೀ ವಸುದೇಂದ್ರ ತೀರ್ಥರು

ಆಶ್ರಮ ಶಿಷ್ಯರು – ಶ್ರೀ ಭುವನೇಂದ್ರ ತೀರ್ಥರು

## ವೃಂದಾವನ – ಪೂನಾ
## ಮೃತ್ತಿಕಾ ವೃಂದಾವನ –ಲಿಂಗಸುಗೂರು(ಸ್ವಪ್ನ ವೃಂದಾವನ)

ಶ್ರೀ ವರದೇಂದ್ರತೀರ್ಥರು ತಮ್ಮ ಮೆಚ್ಚಿನ ಶಿಷ್ಯರಾದ ಲಿಂಗಸುಗೂರಿನ ಪ್ರಾಣೇಶದಾಸರನ್ನು ಕರೆದು, ಅವರ ಭಾಗವಾಗಿದ್ದ ಮನೆಯನ್ನು ತಮ್ಮ ಹೆಸರಿಗೆ ಬರೆದುಕೊಡುವಂತೆ ಆಜ್ಞಾಪಿಸಿದರು. ಅದರಂತೆ ಶ್ರೀ ಪ್ರಾಣೇಶದಾಸರು ತಮ್ಮ ಮನೆಯನ್ನು ಅವರಿಗೇ ಬಿಟ್ಟುಕೊಟ್ಟರು.

ಒಮ್ಮೆ ಶ್ರೀವರದೇಂದ್ರತೀರ್ಥರು, ತಮ್ಮ ವೃಂದಾವನ ಪ್ರವೇಶಾನಂತರ, ಶ್ರೀಪ್ರಾಣೇಶದಾಸರಿಗೆ ಕನಸಿನಲ್ಲಿ ಬಂದು ಪ್ರಾಣೇಶದಾಸರು ತಮಗೆ ನೀಡಿದ್ದ ಭೂಮಿಯಲ್ಲಿ ಬೆಳೆದಿರುವ ತುಳಸೀಕಟ್ಟೆಯಲ್ಲಿ ನನ್ನ ವಿಶೇಷ ಸನ್ನಿಧಾನವಿದೆ, ಅದನ್ನು ಸ್ವಚ್ಛವಾಗಿರಿಸಲು ಹೇಳಿದರು. ಅದರಂತೆ ಪ್ರಾಣೇಶದಾಸರು ಉತ್ತಮವಾಗಿ ಸ್ವಚ್ಛವಾಗಿರಿಸಿದರು.

ಸ್ವಲ್ಪ ಸಮಯದ ನಂತರ, ಶ್ರೀ ವರದೇಂದ್ರತೀರ್ಥರು ತಮ್ಮ ಶಿಷ್ಯರಾದ ಶ್ರೀ ಪ್ರಾಣೇಶದಾಸರಿಗೆ ಮತ್ತೊಮ್ಮೆ ಕನಸಿನಲ್ಲಿ ಬಂದು, ನನ್ನ ಮೃತ್ತಿಕಾ ವೃಂದಾವನವನ್ನು ಲಿಂಗಸುಗೂರಿನಲ್ಲಿ ಒಂದು ಸಮಯವನ್ನು ನಿಗದಿಗೊಳಿಸಿ, ಶ್ರೀಭುವನೇಂದ್ರತೀರ್ಥರ ನೇತೃತ್ವದಲ್ಲಿ ಪ್ರತಿಷ್ಟೆ ಮಾಡಬೇಕೆಂದು ಹೇಳಿದರು. ಆದರೆ ಶ್ರೀ ಭುವನೇಂದ್ರರು ಆ ನಿಗದಿತ ಸ್ಥಳಕ್ಕೆ ನಿಗದಿತ ಸಮಯಕ್ಕೆ ಕೃಷ್ಣಾ ನದಿಯ ಪ್ರವಾಹದಿಂದಾಗಿ ಹೋಗಲಾಗಲಿಲ್ಲ. ಆದರೆ ಲಿಂಗಸುಗೂರಿನ ಪ್ರಾಣೇಶದಾಸರು ಆ ಸ್ಥಳದಲ್ಲೇ ನಿಗದಿತ ಸಮಯಕ್ಕೆ ಸರಿಯಾಗಿ ಶ್ರೀ ಭುವನೇಂದ್ರರ ಅಣತಿಯಂತೆ ಪ್ರತಿಷ್ಠಾಪನೆ ಮಾಡಿದರು. ಆದ್ದರಿಂದ ಆ ವೃಂದಾವನವನ್ನು ಸ್ವಪ್ನವೃಂದಾವನ ಎಂದು ಹೇಳುತ್ತಾರೆ.

ಶ್ರೀರಾಘವೆಂದ್ರತೀರ್ಥರು ತಮ್ಮ ಕಾಲದಲ್ಲಿ ನುಡಿದಿದ್ದ ಮೂರೂ ಮಾತುಗಳು ನಿಜವಾಗಿತ್ತು.

೧. ಶ್ರೀ ರಾಘವೇಂದ್ರರು ಹಲವಾರು ಗ್ರಂಥಗಳನ್ನು ಬರೆದಿದ್ದರು. ಒಟ್ಟು ೫೧ ಗ್ರಂಥಗಳನ್ನು ಬರೆದಿದ್ದಾರೆ. ಒಮ್ಮೆ ಅವರ ಶಿಷ್ಯರು ಬಂದು ಗುರುಗಳಿಗೆ "ಸ್ವಾಮಿ, ನೀವು ಹಲವಾರು ಗ್ರಂಥಗಳನ್ನು ಬರೆದಿದ್ದೀರಿ. ಈ ಗ್ರಂಥಗಳನ್ನು ಈ ಕಲಿಯುಗ ಪ್ರಭಾವವಿರುವುದರಿಂದ ಮುಂದೆ ಯಾರು ಉಪಯೋಗ ಮಾಡಿಕೊಳ್ಳುತ್ತಾರೆ" ಎಂದಾಗ, ರಾಯರು ಮುಂದಿನ ನಮ್ಮ ಪೀಳಿಗೆಯ ಶ್ರೀ ಸುಮತೀಂದ್ರತೀರ್ಥರು ಇದನ್ನೆಲ್ಲಾ ಮಾಡುತ್ತಾರೆ, ಹಲವಾರು ಗ್ರಂಥಗಳನ್ನು ಬರೆಯುತ್ತಾರೆ, ಮಧ್ವ ಮತವನ್ನು ಬೆಳೆಸುತ್ತಾರೆ, ಎಂದಿದ್ದರು. ಅದರಂತೆ ಮುಂದೆ ಅದೇ ಪೀಠದಲ್ಲಿ ಬಂದ ಶ್ರೀ ಸುಮತೀಂದ್ರರು ಬಂದು ಅವರ ಮಾತನ್ನು ನಿಜವಾಗಿಸಿದರು.

೨. ಶ್ರೀರಾಘವೇಂದ್ರತೀರ್ಥರಿಗೆ ತಾವು ಸಶರೀರರಾಗಿ ವೃಂದಾವನ ಪ್ರವೇಶ ಮಾಡುತ್ತೇನೆ ಎಂದಾಗ, ಅವರ ಶಿಷ್ಯರು ಅವರಿಗಾಗಿ ಒಂದು ವೃಂದಾವನವನ್ನು ಸಿದ್ಧಪಡಿಸಿದ್ದರು. ಆಗ ರಾಯರು ಈ ವೃಂದಾವನ ನನಗೆ ಬೇಡ. ಇಲ್ಲೇ ಸಮೀಪದಲ್ಲಿ ಶ್ರೀರಾಮಚಂದ್ರದೇವರು ನಡೆದಾಡಿದ್ದ, ಕುಳಿತಿದ್ದ ಒಂದು ಬಂಡೆಕಲ್ಲಿದೆ, ಅದನ್ನು ತಂದು, ಅದರಲ್ಲಿ ವೃಂದಾವನವನ್ನು ಮಾಡಿರಿ ಎಂದರು. ಆಗ ಅವರ ಶಿಷ್ಯರು "ಸ್ವಾಮಿ, ನಾವು ಈಗಾಗಲೇ ಸಿದ್ಧಪಡಿಸಿರುವ ಈ ವೃಂದಾವನವನ್ನು ಏನು ಮಾಡುವುದು" ಎಂದಾಗ, ರಾಯರು "ಮುಂದೆ ನಮ್ಮ ಮಠದಲ್ಲಿ ಶ್ರೀ ವಾದೀಂದ್ರರು ಬರುತ್ತಾರೆ, ಅವರಿಗೆ ಉಪಯೋಗಿಸಿ" ಎಂದಿದ್ದರು. ಆಗ್ ಶ್ರೀ ವಾದೀಂದ್ರರು ಇನ್ನೂ ಜನಿಸಿ ಕೇವಲ ೧ ೧/೨ ವರ್ಷವಾಗಿತ್ತು. ಆಗಲೇ ರಾಯರು ಅವರನ್ನು ತಮ್ಮ ಆಶ್ರಮಕ್ಕೆ ಸೂಕ್ತವ್ಯಕ್ತಿ ಎಂದು ತೀರ್ಮಾನಿಸಿದ್ದರು. ಮುಂದೆ ರಾಯರ ಸನ್ನಿಧಾನದಲ್ಲೇ ಅವರ ವೃಂದಾವನ ಪ್ರತಿಷ್ಠೆ ಮಾಡಲಾಯಿತು ಮಂತ್ರಾಲಯದಲ್ಲಿ. ಹೀಗೆ ರಾಯರು ಹೇಳಿದ್ದ ಎರಡನೇ ಮಾತೂ ನಿಜವಾಯಿತು.

೩. ಮುಂದೆ ಶ್ರೀ ರಾಘವೇಂದ್ರರು ತಮ್ಮ ಶಿಷ್ಯರಿಗೆ "ಸಪ್ತವೋ ಮತ್ಸವೋ ಯೋಗಿ ವರದೇಂದ್ರೋ ಭವಿಷ್ಯತಿ" ಎಂದಿದ್ದರು. ಅದರಂತೆ ರಾಯರ ನಂತರ ಏಳನೇಯವರಾಗಿ ವರದೇಂದ್ರರು ಆ ಪೀಠವನ್ನಲಂಕರಿಸಿದ್ದರು.

**ಪರಂಪರೆ** – ಶ್ರೀ ವೇಣುಗೋಪಾಲಚಾರ್ಯರು ವಾದೀಂದ್ರರ ಪೂರ್ವಾಶ್ರಮ ಸಹೋದರರು. ವೇಣುಗೋಪಾಲಾಚಾರ್ಯರಿಗೆ ಮೂರು ಜನ ಮಕ್ಕಳು, ಇವರೆಲ್ಲ ಒಂದಲ್ಲ ಒಂದು ಕಾಲದಲ್ಲಿ ರಾಯರ ಮಠದಲ್ಲಿ ಸನ್ಯಾಸಿಗಳಾಗಿ ಸೇವೆ ಸಲ್ಲಿಸಿರುತ್ತಾರೆ.

**೧. ಪುರುಶೋತ್ತಮಚಾರ್ಯರು – ಶ್ರೀ ವಸುದೇಂದ್ರರು**
**೨. ಬಲರಾಮಾಚಾರ್ಯರು – ಶ್ರೀ ವರದೇಂದ್ರತೀರ್ಥರು**
**೩. ಲಕ್ಷ್ಮೀನಾರಾಯಣಾಚಾರ್ಯರು – ಶ್ರೀ ಭುವನೇಂದ್ರ ತೀರ್ಥರು**

ಶ್ರೀ ವಸುದೇಂದ್ರ ತೀರ್ಥರು ತಮ್ಮ ಗುರುಗಳ ಆಜ್ಞೆಯಂತೆ ತಮ್ಮ ಮುಂದಿನ ಪೀಠಾಧಿಪತಿಗಳನ್ನಾಗಿ ಶ್ರೀ ಜಯರಾಮಾಚಾರ್ಯರನ್ನು ನೇಮಕಮಾಡಿದರು (ಆದರೆ ಅವರು ಆಶ್ರಮ ಕೊಡುವ ಸಮಯದಲ್ಲಿ ಸಮೀಪದಲ್ಲಿ ಇರಲಿಲ್ಲ. ಅವರು ಧರ್ಮಪ್ರಚಾರಕ್ಕೆ ಉತ್ತರ ದೇಶಕ್ಕೆ ಹೋಗಿದ್ದರು. ಆದ್ದರಿಂದ ತಮ್ಮ ಸಹೋದರ ಬಲರಾಮಾಚಾರ್ಯರಿಗೆ ಆಶ್ರಮ ಕೊಟ್ಟು ವರದೇಂದ್ರರೆಂದು ನಾಮಕರಣ ಮಾಡಿದ್ದರು. ಶ್ರೀ ವರದೇಂದ್ರರು ಆಶ್ರಮ ಕೊಡುವ ಸಮಯದಲ್ಲೂ ಶ್ರೀ ಜಯರಾಮಚಾರ್ಯರು ದೊರೆಯಲಿಲ್ಲವಾದ್ದರಿಂದ ಅವರು ತಮ್ಮ ಸಹೋದರ ಶ್ರೀ ಲಕ್ಷ್ಮೀನಾರಾಯಣಾಚಾರ್ಯರಿಗೆ ಆಶ್ರಮ ಕೊಟ್ಟು ಶ್ರೀ ಭುವನೇಂದ್ರ ತೀರ್ಥರೆಂದು ನಾಮಕರಣಮಾಡಿ ಅವರಿಗೆ ಜಯರಾಮಾಚಾರ್ಯರಿಗೆ ಆಶ್ರಮ ಕೊಡಲು ಹೇಳಿದರು.

ಆದರೆ ಇಷ್ಟು ಹೊತ್ತಿಗೆ ಜಯರಾಮಾಚಾರ್ಯರು ತಾವೇ ಕುಂಭಕೋಣದ ಶ್ರೀ ವಿಜಯೀಂದ್ರ ತೀರ್ಥರೆದುರಿಗೆ ಬಂದು ನಿಂತು ತಾವೇ ಆಶ್ರಮ ಸ್ವೀಕರಿಸಿದ್ದರು. ಅವರೇ ಧೀರೇಂದ್ರ ತೀರ್ಥರು.

**ವಸುದೇಂದ್ರರಿಂದ ರಚಿತವಾದ ಗ್ರಂಥಗಳು –**

**೧. ದೇವಪೂಜಾ ಪದ್ದತಿ (ಸಂಸ್ಕೃತ)**

**೨. ತಂತ್ರಸಾರ(ಕನ್ನಡ)**

ಶ್ರೀ ವರದೇಂದ್ರರ ಕಾರ್ಯವೈಖರಿ – ಇವರ ಕಾಲದಲ್ಲಿ ಶ್ರೀ ಮಠದ ಸರ್ವಾಂಗೀಣ ವೃದ್ಧಿಯಾಯಿತು.

೧. ಪೂನಾ ನಗರದಲ್ಲೇ ಅತ್ಯಂತ ಪ್ರಸಿದ್ದನಾದ ರಾಮಾ ಶಾಸ್ತ್ರಿಗಳೆಂಬುವರೊಂದಿಗೆ ವಾಗ್ವಾದ ಮಾಡಿ, ವಾಗ್ವಾದದ ನಿಯಮಾನುಸಾರ, ವಾಗ್ವಾದದಲ್ಲಿ ಸೋತ ಶ್ರೀ ರಾಮಾಶಾಸ್ತ್ರಿಗಳು ತಾವು ವಾಸಿಸುತ್ತಿದ್ದ ಮನೆಯನ್ನೆ ಶ್ರೀಗಳವರಿಗೆ ಸಮರ್ಪಿಸಿದರು.

೨. ಸೋಮರಾಜನೆಂಬ ನಾಯಕನು 1774 ರಲ್ಲಿ ಭೂದಾನವನ್ನು ಮಾಡಿದನು

೩. ವೀರವೆಂಕಟ ತಿರುಮಲರಾಯ ಮತ್ತು ಬಲಸಾಥ್ ಜಂಗ್ ಎಂಬವರು ದಾನಾಪುರ ಎಂಬ ಗ್ರಾಮವನ್ನೇ 1769ರಲ್ಲಿ ನೀಡಿದರು.

೪. ಇವರು ವ್ಯಾಸ ಸಾಹಿತ್ಯದ ಜೊತೆಗೇ ದಾಸ ಸಾಹಿತ್ಯಕ್ಕೂ ಸಕಲ ಪ್ರೋತ್ಸಾಹ ನೀಡಿದರು. ಇವರ ಕಾಲದಲ್ಲಿ ಜಗನ್ನಾಥದಾಸರು, ವಿಜಯದಾಸರು, ಪ್ರಾಣೇಶದಾಸರು ಮೊದಲಾದವರು ಶ್ರೀಗಳಿಂದ ವಿಶೇಷ ಮನ್ನಣೆ ಪಡೆದಿದ್ದರು. ಲಿಂಗಸುಗೂರಿನಲ್ಲಿ “ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ” ಈಗಲೂ ಕಾರ್ಯನಿರತವಾಗಿದೆ.

೫.<u>ಸಮಕಾಲೀನರು</u> – ಶ್ರೀ ಸತ್ಯಬೋಧರು, ಶ್ರೀಧೀರೇಂದ್ರತೀರ್ಥರು, ಜಗನ್ನಾಥದಾಸರು, ಪ್ರಾಣೇಶದಾಸರು, ವಿಜಯದಾಸರು, ಗೋಪಾಲದಾಸರು, ಗುರು ಜಗನ್ನಾಥದಾಸರು

೬.ಇವರ ಬಗ್ಗೆ ಲಭ್ಯವಿರುವ ಸ್ತೋತ್ರಗಳು –

ವರದೇಂದ್ರ ಗುರುಸ್ತೋತ್ರವ್ – ಗುರು ಜಗನ್ನಾಥದಾಸರು
ಶ್ರೀ ವರದೇಂದ್ರಾಷ್ಟಕವ್
ಶ್ರೀ ವರದೇಂದ್ರ ಕರಾವಲಂಬನ ಸ್ತೋತ್ರ
ಶ್ರೀ ವರದೇಂದ್ರ ವಿಜಯ – ಶ್ರೀ ಪ್ರಸನ್ನ ಶ್ರೀನಿವಾಸ ದಾಸರು

**Collection by Narahari Sumadhwa (9916904341)**

**for [www.sumadhwaseva.com](http://www.sumadhwaseva.com)**